ಹೇಳಿದ್ದೀರಿ, ಮತ್ತೆ condition ಹಾಕಿ ಮಧ್ಯವರ್ತಿಗಳಿಗೆ ಅನುಕೂಲವಾಗ ಬಾರದು. ಅದರ ಜೊತೆಗೆ ಸುಮಾರು 5,000 ನಿವೇಶನದಾರರು, ಇವತ್ತು ಅಲ್ಲಿ ಕಾಯುತ್ತಿದ್ದಾರೆ. ಇದನ್ನು ಯಾವುದೋ ದುರುದ್ದೇಶದಿಂದ ಮಧ್ಯವರ್ತಿ ಗಳಿಗೆ ಅನುಕೂಲವಾಗುವಂತೆ ಮಾಡಬೇಡಿ. ಯಾರು ನಿವೇಶನದಾರರು ಇದ್ದಾರೆ, ಅವರಿಗೆ ಅನುಕೂಲವಾಗುವ ಹಾಗೆ ನಿವೇಶನ ಮಾಡಿಕೊಡಿ, ಕರ್ನಾಟಕ ಗೃಹ ಮಂಡಳಿ ಮತ್ತು ರೈತರಿಗೂ ಅನುಕೂಲವಾಗಬೇಕು. ರೈತರೂ ಸಹ 40 X 60 ಅಡಿ ಅಳತೆಯ ನಿವೇಶನಕ್ಕೆ ಒಪ್ಪಿಕೊಂಡಿದ್ದಾರೆ. ತಾವು ಆ ರೀತಿ ಮಾಡಬೇಕೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಬಗ್ಗೆ last time ಹೇಳಿದ್ದರು. ತಮಗೆ ಮನವಿಯನ್ನು ಮಾಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ವಿಷಯ ಏನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಮಾನ್ಯ ವಸತಿ ಸಚಿವರ ಗಮನಕ್ಕೆ ತರುತ್ತೇನೆ. ಅದರ ಬಗ್ಗೆ ಸರಿಯಾದ ನಿರ್ಣಯವನ್ನು ಕೈಗೊಳ್ಳುತ್ತೇವೆ.

7. ಅರ್ಧಗಂಟೆ ಕಾಲಾವಧಿ ಚರ್ಚೆ :

ವಿಷಯ : ನೆಮ್ಮದಿ ಕೇಂದ್ರಗಳ ಬಗ್ಗೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ನೆಮ್ಮದಿ ಕೇಂದ್ರಗಳ ಬಗ್ಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಇವತ್ತು ನೆಮ್ಮದಿ ಕೇಂದ್ರಗಳ ಮೂಲಕ ಎಲ್ಲಾ ರೀತಿಯ certificate ಗಳನ್ನು ಕೊಡಬೇಕಾಗುತ್ತದೆ. ಅದರಲ್ಲಿ ರೈತರಿಗೆ ಸಂಬಂಧಪಟ್ಟ ಹಾಗೆ ಯಾವ ಬೆಳೆಗಳನ್ನು ಬೆಳೆದಿದ್ದೇವೆಂಬುದನ್ನು entry ಮಾಡಬೇಕಾಗುತ್ತದೆ. ಬ್ಯಾಂಕ್‌ನಿಂದ ಸಾಲವನ್ನು ತೆಗೆಯಬೇಕೆಂದರೆ ಆ RTC ಅನ್ನು ಕೊಡಬೇಕಾಗುತ್ತದೆ. ಅದರ ಜೊತೆಗೆ ಸರಿಯಾಗಿ ಮಾಹಿತಿ ಯನ್ನು feed ಮಾಡುವಂಥ ಅವಕಾಶ ಕೂಡ ಇಲ್ಲ. ಅದರ ಜೊತೆಗೆ Income certificate ಅನ್ನು ಕೂಡ ಅದರ ಮುಖಾಂತರವೇ ಕೊಡುತ್ತಾರೆ.

ಇದರ ಜೊತೆಗೆ ನಮ್ಮ BPL, APL Card ಗಳನ್ನು ಕೂಡ ಈ ನೆಮ್ಮದಿ ಕೇಂದ್ರಗಳ ಮೂಲಕವೇ ಕೊಡುತ್ತಾರೆ. ಅಂಥ ಸಂದರ್ಭದಲ್ಲಿ Income certificate ಅನ್ನು ಕೂಡ ಈ ನೆಮ್ಮದಿ ಕೇಂದ್ರದಿಂದಲೇ ಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ನೆಮ್ಮದಿ ಕೇಂದ್ರಗಳಲ್ಲಿ ಸರಿಯಾದ ರೀತಿಯಲ್ಲಿ address ಗಳು, ತಂದೆಯ ಹೆಸರು, ಮತ್ತು ಮಕ್ಕಳ ಹೆಸರುಗಳು ಕಾರ್ಡ್‌ಗಳಲ್ಲಿ ಸರಿಯಾಗಿ ಬರದೇ ಬಹಳಷ್ಟು ನೆಮ್ಮದಿ ಹಾಳಾಗಿದೆ. ಜನರ ನೆಮ್ಮದಿ ಕೆಟ್ಟಿರುವುದರಿಂದ, ಜನರು ನಮ್ಮ ನೆಮ್ಮದಿಯನ್ನು ಕೆಡಿಸುತ್ತಿದ್ದಾರೆ. ಆ ದೃಷ್ಟಿಯಿಂದ ನೆಮ್ಮದಿ ಕೇಂದ್ರಗಳನ್ನು ಯಾವ ಆಧಾರದಲ್ಲಿ, ಯಾವ ಮಾನದಂಡದಲ್ಲಿ, ಯಾವ criteria ದಲ್ಲಿ ಕೊಟ್ಟಿದ್ದೀರಿ. ಅದಕ್ಕೆ ಯಾರು.. .. .

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಶ್ರೀ ಹೆಚ್.ಎಸ್. ಪ್ರಕಾಶ್ ರವರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ದಯಮಾಡಿ ಉತ್ತರ ಕೊಡಬೇಕು.

ಅಧ್ಯಕ್ಷರು : ನೀವು ಈಗ ಕೇಳುತ್ತಿದ್ದೀರಿ, ಆಗಲೇ ನಾನು ಎರಡು ಸಲ ಕರೆದಿದ್ದೇನೆ. ನಿಮಗೆ authorization ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಇಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಇದ್ದಾರೆ, ಆ reply copy ಯನ್ನು ಕೊಡಿಸಿ, ಸಾಕು.

ಅಧ್ಯಕ್ಷರು : ಆಯಿತು, reply copy ಕಳುಹಿಸಿಕೊಡುತ್ತಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಮುಖ್ಯ ಮಂತ್ರಿಗಳ ಪರವಾಗಿ) : ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕಸಬಾ ಹೋಬಳಿಯ ಈ ಕೆಳಕಂಡ ಗ್ರಾಮಗಳಲ್ಲಿ ಆ ಗ್ರಾಮಗಳ ಮುಂದೆ ಕಾಣಿಸಿದ ವಿಸ್ತೀರ್ಣದ ಜಮೀನುಗಳನ್ನು ಕರ್ನಾಟಕ ಗೃಹ ಮಂಡಳಿಯು ವಸತಿ ಯೋಜನೆಗಾಗಿ ಭೂ-ಸ್ವಾಧೀನಪಡಿಸಿಕೊಳ್ಳಲು ದಿನಾಂಕ: 21-6-2007 ರಂದು ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 7-5-2007 ರಂದು ಪ್ರಕಟಗೊಂಡಿರುತ್ತದೆ.

ಕ್ರ. ಸಂ.	ಗ್ರಾಮದ ಹೆಸರು	ಅಧಿಸೂಚನೆ ಹೊರಡಿಸಿದ ಒಟ್ಟು ವಿಸ್ತೀರ್ಣ.
1	ಚಿಕ್ಕಕೊಂಡಗೋಳ	397 ಎಕರೆ 8,1/2 ಗುಂಟೆ
2	ಮಾವಿನಹಳ್ಳಿ	124 ಎಕರೆ 20 ಗುಂಟೆ
3	ಸತ್ಯಮಂಗಲ	76 ಎಕರೆ 18,1/2 ಗುಂಟೆ
	ಒಟ್ಟು ವಿಸ್ತೀರ್ಣ	**598 ಎಕರೆ 07 ಗುಂಟೆ**

ಈ ಅಧಿಸೂಚನೆಯ ನಂತರ, ಒಟ್ಟು 540 ರೈತರು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಆ ಬಗ್ಗೆ ಗ್ರಾಮಾವಾರು ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ಗ್ರಾಮದ ಹೆಸರು	ಆಕ್ಷೇಪಣೆ ಸಲ್ಲಿಸಿದ ರೈತರ ಸಂಖ್ಯೆ
1	ಚಿಕ್ಕಕೊಂಡಗೋಳ	442
2	ಮಾವಿನಹಳ್ಳಿ	42
3	ಸತ್ಯಮಂಗಲ	56
	ಒಟ್ಟು	**540**

ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ರೈತ ಜೊತೆ ಮಾತುಕತೆ ನಡೆಸುವ ಬಗ್ಗೆ ಪ್ರಸ್ತಾಪ ಇರುವುದಿಲ್ಲ. ಆದರೆ ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆ ಹೊರಡಿಸಿದಾಗ ಆಕ್ಷೇಪಣೆ ಸಲ್ಲಿಸಿದ ರೈತರಿಗೆ ವಿಚಾರಣೆಗೆ ನೋಟೀಸ್ ನೀಡಿ ಅವರ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಲಾಗಿದೆ ಮತ್ತು ಸದರಿ ಕಾಯ್ದೆಯ ಕಲಂ 6(1)ರ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ, ಭೂ–ಪರಿಹಾರ ನಿಗದಿ ಬಗ್ಗೆ, ಕಲಂ 9 ಮತ್ತು 10ರಡಿ ರೈತರಿಗೆ ನೋಟೀಸ್ ನೀಡಿ, ಹಕ್ಕು ಬಾಧ್ಯತೆಗಳ ಹಾಗೂ ಭೂ–ಪರಿಹಾರದ ಬಗ್ಗೆ ವಿಚಾರಣೆ ಮಾಡಲಾಗುವುದು.

ವಿಚಾರಣೆ ವೇಳೆಯಲ್ಲಿ, ಆಕ್ಷೇಪಣೆಗಳ ಬಗ್ಗೆ ಪೂರ್ಣ ವಿವರಗಳನ್ನು ಪಡೆದುಕೊಂಡ ನಂತರ, ಈ ಭೂಮಿಯ ಸ್ಥಳ ಪರಿಶೀಲನೆ ನಡೆಸಲು ದಿನಾಂಕ: 9–12–2009 ರಂದು ಅಧಿಕಾರಿಗಳು ಭೇಟಿಕೊಟ್ಟ ಸಂದರ್ಭದಲ್ಲಿ ದಾಸರಕೊಪ್ಪಲು ಗ್ರಾಮದಲ್ಲಿ ಗುಂಪೊಂದು, ಅಧಿಕಾರಿಗಳನ್ನು ತಡೆಗಟ್ಟಿ, ಅಧಿಕಾರಿಗಳಿದ್ದ ವಾಹನಗಳನ್ನು ಜಖಂಗೊಳಿಸಿತಲ್ಲದೇ, ಹಾಜರಿದ್ದ

ಅಧಿಕಾರಿಗಳಿಗೆ ಬೆದರಿಕೆ ಹಾಕಿ, ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳುವುದಿಲ್ಲ ವೆಂಬಂತೆ ಅವರಿಂದ ಒತ್ತಾಯ ಪೂರ್ವಕವಾಗಿ ಒಂದು ಪತ್ರವನ್ನು ಸಹ ಬರೆಸಿಕೊಂಡಿರುತ್ತಾರೆ. ಈ ಬಗ್ಗೆ, ಅದೇ ದಿನ ಹಾಸನ ನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ನಂತರ, ದಾಖಲಾತಿಗಳನ್ನು ಪರಿಶೀಲಿಸಿ ಅದರಂತೆ, ಹಾಸನದಲ್ಲಿ ವಸತಿ ನಿವೇಶನಗಳನ್ನು ಕೋರಿ, 1400ಕ್ಕೂ ಹೆಚ್ಚಿನ ಅರ್ಜಿದಾರರು ಕರ್ನಾಟಕ ಗೃಹ ಮಂಡಳಿಯಲ್ಲಿ ನೊಂದಾಯಿಸಿರುವ ಅರ್ಜಿಗಳನ್ನು ಪರಿಗಣಿಸಿ, ದಿನಾಂಕ: 18–1–2010 ರಂದು ಭೂಸ್ವಾಧೀನ ಕಾಯ್ದೆಯ ಕಲಂ 6(1)ರನ್ವಯ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 4–2–2010 ರಂದು ಪ್ರಕಟಗೊಂಡಿದೆ,

ಆದರೆ, ಪ್ರಸ್ತಾವಿತ ಜಮೀನುಗಳು, ಫಲವತ್ತಾದ ಭೂಮಿಯಾದ್ದರಿಂದ ಅವುಗಳನ್ನು ವಸತಿ ನಿವೇಶನಗಳಿಗಾಗಿ ಭೂ ಸ್ವಾಧೀನ ಮಾಡುವುದು ಬೇಡವೆಂದು ರೈತರು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ರೈತರುಗಳು ಈ ಜಮೀನುಗಳನ್ನು ಮುಂದೆ ಕನಿಷ್ಠ ಐದು ವರ್ಷಗಳವರೆಗೆ ಕೃಷಿ ಭೂಮಿಯಾಗಿಯೆ ಮುಂದುವರಿಸಿಕೊಂಡು ಹೋಗಬೇಕೆಂದು ಮತ್ತು ಯಾವುದೇ ರೀತಿಯಲ್ಲಿ ಇವುಗಳನ್ನು ಮಧ್ಯವರ್ತಿಗಳಿಗೆ ನೀಡಬಾರದೆಂಬ ಷರತ್ತನ್ನು ವಿಧಿಸಿ ಭೂ ಸ್ವಾಧೀನದಿಂದ ಕೈಬಿಡುವ ಬಗ್ಗೆ ಪರಿಶೀಲಿಸಿ ಅದರಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ : ಮಾನ್ಯ ಅಧ್ಯಕ್ಷರೆ, ಇದರಿಂದ ನೆಮ್ಮದಿ ಇಲ್ಲದೇ ಇರುವ ಪರಿಸ್ಥಿತಿಯಾಗಿದೆ. ಇದರ contract ಅನ್ನು ಯಾರು ತೆಗೆದುಕೊಂಡಿದ್ದಾರೆ, ಇದರ ಮಾನದಂಡ ಏನು? ಯಾವ ರೀತಿ agreement ಆಗಿದೆ? ಇದರಲ್ಲಿ ಒಬ್ಬರು ಸರ್ಕಾರಿ IAS Officer ಕೂಡ ಇದರಲ್ಲಿ ಪಾಲುದಾರರು ಎಂದು ಕೇಳಿ ಬಂದಿದೆ. ಇದರಲ್ಲಿ ಯಾರು ಇದ್ದಾರೆಂಬ ಬಗ್ಗೆ ವಿವರವಾದ ಉತ್ತರವನ್ನು ಕೊಡಬೇಕು. ಇದರ ಜೊತೆಗೆ ಈ ನೆಮ್ಮದಿ ಕೇಂದ್ರಗಳನ್ನು ರದ್ದುಗೊಳಿಸಿ, ಸರ್ಕಾರವೇ ನವ್ಮ ತಹಶೀಲ್ದಾರರ office ನಲ್ಲಿ, ಹೋಬಳಿ office ನಲ್ಲಿ ನೆಮ್ಮದಿ ಕೇಂದ್ರಗಳು ಏನು ಮಾಡುತ್ತಿವೆ, ಅದನ್ನು run ಮಾಡುವಂಥ ವ್ಯವಸ್ಥೆಯಾಗಬೇಕೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ಈ ನೆಮ್ಮದಿ ಕೇಂದ್ರಗಳಿಂದ

ಸರ್ಕಾರಕ್ಕೂ ಕೂಡ ಕೆಟ್ಟ ಹೆಸರು ಬರುತ್ತದೆ. ಇದರ ಜೊತೆಗೆ ನೆಮ್ಮದಿ ಕೇಂದ್ರಗಳಿಗೆ ಕೊಟ್ಟಿರುವಂಥ ಯಾವುದೇ income certificate ಇರಬಹುದು, ಅದು ಕೂಡ 3 ತಿಂಗಳು, 4 ತಿಂಗಳುಗಳಾಗುವ ವ್ಯವಸ್ಥೆ ಇದೆ. ನಾವು ಯಾರಾದರೂ enquiry ಮಾಡಿದಾಗ, ಅದಕ್ಕೆ ಯಾರು ಉತ್ತರವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲ, Phone ಮಾಡಿದರೆ ಯಾರು phone receive ಮಾಡುವುದಿಲ್ಲ. ಎಲ್ಲಾದರೂ current ಹೋದರೆ ದಿವಸ ಗಟ್ಟಲೆ ಕೊಡುವುದಿಲ್ಲ. ಅಲ್ಲಿ computer ಹಾಳಾದರೆ ತಿಂಗಳಾನುಗಟ್ಟಲೆ ನಾವು certificate ಗೆ ಒದ್ದಾಡುವಂಥ ಪರಿಸ್ಥಿತಿಯಾಗಿದೆ. ಇದರಿಂದ ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ವಿನಂತಿಸಿಕೊಳ್ಳುವುದೇನೆಂದರೆ, ಈ ನೆಮ್ಮದಿ ಕೇಂದ್ರಗಳ contract ಏನು ಕೊಟ್ಟಿದ್ದೀರಿ, ಅದನ್ನು ದಯವಿಟ್ಟು ರದ್ದುಪಡಿಸಿ, ಅದನ್ನು ತಾಲ್ಲೂಕು ತಹಶೀಲ್ದಾರರ control ಗೆ ಕೊಟ್ಟು, DC ಯವರ control ಗೆ ಕೊಟ್ಟು, ಎಲ್ಲಾ ರೈತರಿಗೆ ಆ ನೆಮ್ಮದಿ ಕೇಂದ್ರದಿಂದ ಆದಷ್ಟು ಬೇಗನೆ, ಆದಷ್ಟು ಶೀಘ್ರ certificate ಸಿಗುವಂಥ ವ್ಯವಸ್ಥೆಯಾಗಬೇಕು. ಇವತ್ತು ration card ಇರಬಹುದು, ಅದು ಕೂಡ ಈ ನೆಮ್ಮದಿ ಕೇಂದ್ರಗಳ ಮೂಲಕ ಕೊಡಬೇಕಾಗುತ್ತದೆ, ಅದರ ಜೊತೆಗೆ income certificate ಕೂಡ ಈ ನೆಮ್ಮದಿ ಕೇಂದ್ರದಿಂದ ಕೊಡಬೇಕಾಗುತ್ತದೆ, ಜಾತಿ certificate ಇದೆ, ಅದನ್ನು ಕೂಡ ನೆಮ್ಮದಿ ಕೇಂದ್ರಗಳಿಂದ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ತಮ್ಮ ಮುಖಾಂತರ ವಿನಂತಿಸಿಕೊಳ್ಳುವುದೇನೆಂದರೆ, ತಾವು ದಯವಿಟ್ಟು ನೆಮ್ಮದಿ ಕೇಂದ್ರಗಳಿಗೆ ಕೊಟ್ಟಿರುವ contract ಅನ್ನು ರದ್ದುಗೊಳಿಸಿ, ಅವರನ್ನು black list ಗೆ ಹಾಕುವಂಥ ವ್ಯವಸ್ಥೆ ಮಾಡಿ, ಯಾರು contract ಗಳು ಇದ್ದಾರೆ, ಪಾಲುದಾರರು ಇದ್ದಾರೆ, ಆ ಪಟ್ಟಿಯನ್ನು ಬಿಡುಗಡೆ ಮಾಡಬೇಕು ಮತ್ತು ಅದನ್ನುರದ್ದು ಪಡಿಸಿ, ಈ ನೆಮ್ಮದಿ ಕೇಂದ್ರಗಳನ್ನು ತಹಶೀಲ್ದಾರರ ಕಛೇರಿಗೆ, DC ಯವರ control ಗೆ ಕೊಡಬೇಕೆಂದು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಅಪ್ಪಚ್ಚುರಂಜನ್‌ರವರು ನೆಮ್ಮದಿ ಕೇಂದ್ರಗಳ ಬಗ್ಗೆ ಮಾತನಾಡಿದ್ದಾರೆ. ಇದನ್ನು Comat Agency ಯವರಿಗೆ ಕೊಟ್ಟಿದ್ದಾರೆ. ಇವರಿಗೆ ನ್ಯಾಯ ಬೆಲೆ ಅಂಗಡಿ

ಕಾರ್ಡ್‌ಗಳನ್ನು ಹಂಚಲು ಕೊಟ್ಟಾಗ, condition ಏನು ಐತ್ತೆಂದರೆ Bio-metric System ಅನ್ನು ಅಳವಡಿಸಬೇಕು. ಒಂದು ಕುಟುಂಬದಲ್ಲಿ ಒಬ್ಬ ಕಾರ್ಡ್‌ದಾರ ಅಂದರೆ ಯಜಮಾನ ಮತ್ತು ಆತನ ಮನೆಯ ಎಲ್ಲಾ ಸದಸ್ಯರು ಹೋಗಿ ಹೆಬ್ಬೆಟ್ಟು ಒತ್ತಿದರೆ ಆ ಹೆಬ್ಬೆಟ್ಟು ಒತ್ತಿದ ತಕ್ಷಣ ಅದು open ಆಗಬೇಕು. ಅವರಿಗೆ ಮಾತ್ರ ration ಸಿಗುವಂತೆ ಆಗಬೇಕು, ಉಳಿದವರಿಗೆ ಆಗಬಾರದೆಂಬ ಉದ್ದೇಶದಿಂದ ಆ Bio-metric System ಅನ್ನು introduce ಮಾಡುವುದಕ್ಕೆ ಈ agencyಯನ್ನು fix ಮಾಡಿ ಕೊಟ್ಟಿದ್ದಾರೆ. ಇವತ್ತು ಅಲ್ಲಿ ಏನಾಗಿದೆಯೆಂದರೆ ಈ Bio-metric System ಅನ್ನು ಮಾಡುವುದಕ್ಕೆ photo ಗಳನ್ನು ಎಲ್ಲಾ ಊರುಗಳಿಗೆ ಹೋಗಿ ತೆಗೆದರು. ಇದನ್ನು ತೆಗೆಯುವುದಕ್ಕೆ ಪ್ರಾರಂಭ ಮಾಡುವ ಮುಂಚೆ ಎಂ.ಪಿ.ಗಳ election ಬಂದಾಗ 50 ರೂಪಾಯಿಗಳನ್ನು ಕೊಟ್ಟು ನೆಮ್ಮದಿ ಕೇಂದ್ರಗಳಲ್ಲಿ ಯಾರು ಬೇಕಾದರೂ ಕಾರ್ಡ್‌ಗಳನ್ನು ತೆಗೆದುಕೊಳ್ಳಬಹುದೆಂದು ಸರ್ಕಾರ ಆದೇಶ ಮಾಡಿತ್ತು. ಆಗ ಎಲ್ಲರೂ ಹೋಗಿ 50 ರೂಪಾಯಿಗಳನ್ನು ಕಟ್ಟಿದರು, ಒಂದೊಂದು ಮನೆಯಲ್ಲಿ 8, 10 ಕಾರ್ಡ್‌ಗಳನ್ನು ತೆಗೆದುಕೊಂಡರು. ಅವರೆಲ್ಲರಿಗೂ ration ಕೊಟ್ಟರು, ಇವರಿಗೆ ration ಕೊಟ್ಟಮೇಲೆ ಈ ರೀತಿಯಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂತು. ಇನ್ನು ಮುಂದೆ ಯಾರು photo ತೆಗೆಸಿ ಕೊಳ್ಳುತ್ತಾರೆ, photo ತೆಗೆಸಿಕೊಂಡವರಿಗೆ ಮಾತ್ರ ಆಹಾರ ಧಾನ್ಯಗಳನ್ನು ಕೊಡುವುದೆಂದು ಹೇಳಿದ ಮೇಲೆ ಆ photo ತೆಗೆದವರ ಕಾರ್ಡ್‌ಗಳನ್ನು ಕೊಡುವುದಕ್ಕೆ ಹೋಗಿ ಹೆಬ್ಬೆಟ್ಟು ಇಟ್ಟರೆ ಅದು open ಆಗಲೇ ಇಲ್ಲ. ಆ Bio-metric System, Thumb Impression tally ಆಗುತ್ತಿಲ್ಲ.

ಹಾಗಾಗಿ entire mess ಆಗಿ ಹೋಗಿದೆ. ಇವತ್ತು ಅಲ್ಲಿ ಯಾರಿಗೂ ಕಾರ್ಡ್ ಸಿಗಲಿಲ್ಲ. ಕಾರ್ಡ್ ರೆಡಿ ಇದ್ದರೂ ಕೊಡುವುದಕ್ಕೆ ಆಗಲಿಲ್ಲ. ಗಲಾಟೆ ಯಾಯಿತು, ಗಲಾಟೆಯಾದ ಮೇಲೆ A.C., D.C. ಯವರು ಅಲ್ಲಿಗೆ ಹೋಗಿ, food department ನವರು thumb impression ಇಟ್ಟರೆ open ಆಗುತ್ತದೆ, ಆ ರೀತಿ department ನವರು thumb impression ಇಟ್ಟು ಕಾರ್ಡ್‌ಗಳನ್ನು issue ಮಾಡಿಬಿಟ್ಟರು. ಕಾರ್ಡ್ issue ಮಾಡುವಾಗ ಇನ್ನೊಂದು ಗೊಂದಲ

ಏನು ಮಾಡಿದ್ದಾರೆ ಎಂದರೆ A.P.L. card ಇದ್ದವರಿಗೆ B.P.L. card ಬಂದಿದೆ, B.P.L. card ಇದ್ದವರಿಗೆ A.P.L. card ಬಂದಿದೆ, ಯಾವ ಮಟ್ಟಕ್ಕೆ ಕಾರ್ಡ್‌ಗಳು issue ಆಗಿವೆ ಎಂದರೆ, ನನ್ನ ರಾಯಚೂರು ಜಿಲ್ಲೆಯಲ್ಲಿ 90% B.P.L. card issue ಆಗಿವೆ. ಚಾಮರಾಜನಗರ ಜಿಲ್ಲೆಯಲ್ಲಿ 135% B.P.L. card issue ಆಗಿವೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ 100% ಗಿಂತ ಹೆಚ್ಚು B.P.L. card issue ಆಗಿವೆ. B.P.L. card ಮತ್ತು A.P.L. card ಇವೆರಡರನ್ನೂ ಸೇರಿಸಿದರೆ 150 ರಿಂದ 175% ವರೆಗೆ ಕಾರ್ಡ್‌ಗಳನ್ನು issue ಮಾಡಲಾಗಿದೆ. ಇದನ್ನು ಹೇಗೆ ಸರಿಪಡಿಸುವುದಕ್ಕೆ ಸಾಧ್ಯ? A.P.L. ಇದ್ದದ್ದು B.P.L. ಆಗಿದೆ ಎನ್ನುವುದಕ್ಕೆ ಸರ್ವೆ ಮಾಡುವುದಕ್ಕೆ ಹೇಳಿ, ರೆವಿನ್ಯೂ ಇಲಾಖೆಯವರು ಸರ್ವೆ ಮಾಡಿ, ಇಂಥದು A.P.L., ಇಂಥದು B.P.L. ಎಂದು ಒಂದು ವರದಿ ಕೊಟ್ಟಿದ್ದು, ಅದನ್ನು ಪರಿವರ್ತನೆ ಮಾಡಿ ಎಂದರೆ ಅವರಿಗೆ ಮಾಡುವುದಕ್ಕೆ ಆಗುತ್ತಿಲ್ಲ. ಈ ರೀತಿ ಹೇಗೆ ಬೇಕೋ ಹಾಗೆ ಆಗಿದ್ದು, ಇಂಥ mess ಆಗಿದೆ. 150% card issue ಆಗಿವೆ. ಇದರಿಂದ ಆಹಾರ ಧಾನ್ಯ ಕೊಡುವುದಕ್ಕೆ ಆಗುತ್ತಿಲ್ಲ. ಎಲ್ಲಾ ಕಾರ್ಡುದಾರರು ಹೋಗಿ ಅಂಗಡಿಯ ಮುಂದೆ ಗಲಾಟೆ ಮಾಡಿದರೆ, ಅಂಗಡಿಯವರು ಎಲ್ಲರಿಗೂ 1 ಕೆ.ಜಿ., 2 ಕೆ.ಜಿ., 3 ಕೆ.ಜಿ. ಹೀಗೆ ಬಂದಿರುವ ಆಹಾರದಲ್ಲಿ divide ಮಾಡಿ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. Entire system ಅನ್ನು Comat agency ಯವರು ಹಾಳು ಮಾಡಿದ್ದಾರೆ. ಆ ಏಜೆನ್ಸಿಯವರು ಯಾರು? ಇದರ ಬಗ್ಗೆ ಆಗಲೇ ಅಪ್ಪಚ್ಚು ರಂಜನ್ ರವರು ಹೇಳಿದರು, ಯಾವುದೋ ಕಾರಣಕ್ಕೆ, ಯಾರನ್ನೋ please ಮಾಡುವುದಕ್ಕೆ ಹೋಗಿ ಕೋಟ್ಯಾಂತರ ರೂಪಾಯಿ ಅವರಿಗೆ ಕೊಟ್ಟಿದ್ದಾರೆ. ಇದು ಇನ್ನೂ ಒಂದೆರಡು ವರ್ಷವಲ್ಲ, ಐದು ವರ್ಷವಾದರೂ ಕೂಡ ಕಾರ್ಡ್‌ಗಳ: ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಿಲ್ಲ. ಅಷ್ಟು mess ಮಾಡಿದ್ದಾರೆ. ಅಂಥವರಿಗೆ ಈಗ ಮತ್ತೆ ಸರ್ಕಾರದ ಎಲ್ಲ ಯೋಜನೆಗಳನ್ನು ಕೊಡುತ್ತಿದ್ದೀರಿ. Income certificate ಬೇಕು ಎಂದರೂ ಅವರ ಹತ್ತಿರ ಹೋಗಬೇಕು, ಪಹಣಿ ಬೇಕು ಎಂದರೂ ಅವರ ಹತ್ತಿರ ಹೋಗಬೇಕು. ಹೀಗೆ, ಎಲ್ಲದಕ್ಕೂ ಅವರ ಹತ್ತಿರ ಹೋಗಬೇಕು. ಈಗಾಗಲೇ ಇಷ್ಟು mess ಮಾಡಿರುವಂಥವರಿಗೆ ಮತ್ತೆ ನೀವು ಸರ್ಕಾರದ ಎಲ್ಲ ಯೋಜನೆಗಳನ್ನು ಕೊಡುವ ವ್ಯವಸ್ಥೆ ಮಾಡುತ್ತಿದ್ದೀರಲ್ಲ, ಇದು ಎಷ್ಟರ ಮಟ್ಟಿಗೆ ಸರಿ. ಇದನ್ನು

ನೀವು ಯೋಚನೆ ಮಾಡಬೇಕು. ಇಲ್ಲದಿದ್ದರೆ ಈ ಕಾರ್ಡ್ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ. Bio metric system ತರಬೇಕು ಎನ್ನುವ ಉದ್ದೇಶವನ್ನೇನು ಇಟ್ಟುಕೊಂಡಿದ್ದಿರಿ, ಇದನ್ನು improvement ಮಾಡುವುದಕ್ಕೆ ಆಗುವುದೇ ಇಲ್ಲ ಎನ್ನುವಷ್ಟು ಹೊಲಸು ಎಬ್ಬಿಸಿದ್ದಾರೆ. ಹಾಗಾಗಿ, ನಾನೂ ಕೂಡ ಹೇಳುತ್ತೇನೆ, ಆ ಏಜೆನ್ಸಿಯವರ ಮೇಲೆ enquiry ಮಾಡಿ. ಅವರಿಗೆ ಎಷ್ಟು ಕೋಟಿ ರೂಪಾಯಿ ಕೊಟ್ಟಿರಿ? ರೇಷನ್ ಕಾರ್ಡ್‌ಗಳಿಗಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಫೋಟೋ ತೆಗೆಸಿದ್ದೀರಿ. ಎಲ್ಲ ಸರಿಯಾಯಿತು ಎನ್ನುವಷ್ಟರಲ್ಲಿ ಈಗ ಮತ್ತೆ thumb impression ನಿಂದ open ಆಗುತ್ತಿಲ್ಲ. ನೀವು ಆ ಏಜೆನ್ಸಿಯವರ ಮೇಲೆ enquiry ಮಾಡಿ, ಅವರಿಂದ ಹಣ ವಸೂಲು ಮಾಡಿ, ಅವರನ್ನು black list ಗೆ ಹಾಕುತ್ತೀರೋ, ಗಲ್ಲಿಗೆ ಹಾಕುತ್ತೀರೋ ನೋಡಿ. ಮತ್ತೆ ಎಲ್ಲ ಯೋಜನೆಗಳನ್ನು ಅವರಿಗೆ ಕೊಡುತ್ತಾ ಹೋದರೆ ಹೇಗೆ? ಇದು ನಮ್ಮೆಲ್ಲರ ನೆಮ್ಮದಿಯನ್ನು ಹಾಳು ಮಾಡಿಟ್ಟಿದೆ. ನೆಮ್ಮದಿ ಕೇಂದ್ರಗಳಿಂದ ಶಾಸಕರಿಗೆ ನೆಮ್ಮದಿಯೇ ಇಲ್ಲ. ಅದಕ್ಕಾಗಿ ನಾವು ಕೂಡ ಒತ್ತಾಯ ಮಾಡುತ್ತೇವೆ, ಅದನ್ನು ಬಂದ್ ಮಾಡಿ, ಅದಕ್ಕೆ ಮತ್ತೆ ಬೇರೆ ಏನು ವ್ಯವಸ್ಥೆ ಮಾಡಬೇಕು ಎಂದು ಯೋಚನೆ ಮಾಡಿ ನೀವು ಕ್ರಮ ತೆಗೆದುಕೊಳ್ಳದಿದ್ದರೆ ಈ system ಸರಿಹೋಗುವುದಿಲ್ಲ. ದಯವಿಟ್ಟು ಇದರ ಮೇಲೆ ತಾವು ಕ್ರಮ ತೆಗೆದು ಕೊಳ್ಳಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅಪ್ಪಚ್ಚುರಂಜನ್‌ರವರು ತಂದಿರತಕ್ಕಂಥ ಬಹಳ ಉತ್ತಮವಾಗಿರತಕ್ಕಂಥ ಒಂದು ಪ್ರಶ್ನೆಗೆ ತಾವು ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಇದರಲ್ಲಿ ಎರಡು ವಿಷಯಗಳಿವೆ. Comat ಸಂಸ್ಥೆಗೆ ಯಾವ ರೀತಿಯಾಗಿ ಈ ಒಂದು contract ಅನ್ನು ಕೊಟ್ಟಿದ್ದೀರಿ ಎನ್ನುವುದು ಮೊದನೆಯ ಪ್ರಶ್ನೆ. ಏಕೆಂದರೆ, ಇದರಲ್ಲಿ K.T.T.P. Act violation ಆಗಿದೆ ಎಂದು ruling party ಯ ಒಬ್ಬ ಸದಸ್ಯರು ಆರೋಪ ಮಾಡಿರುವುದು ಗಮನಾರ್ಹ. ಯಾವುದೇ ಒಂದು contract ಅನ್ನು ಕೊಡಬೇಕಾದರೆ, we have to follow certain norms. ಅದಕ್ಕೆ ಒಂದು ಕಾಯಿದೆ ಇದೆ. ಇಲ್ಲಿ ಆ Karnataka Transparency Act violation ಆಗಿದೆ ಎನ್ನುವುದನ್ನು

ಹೇಳಿದ್ದಾರೆ. ಅದರ ಬಗ್ಗೆ ತನಿಖೆಯಾಗಬೇಕು. ಇನ್ನೊಂದು ಮಾತನ್ನು ಕೂಡ ಅವರು ಹೇಳಿದ್ದಾರೆ, ಏನೆಂದರೆ, there is pecuniary interest of some I.A.S. officer in the State. It is a very serious and grave charge. ಯಾವುದೇ ಒಬ್ಬ ಸರ್ಕಾರಿ ಅಧಿಕಾರಿ, ಯಾವುದೇ ಒಂದು contract ನಲ್ಲಿ ಭಾಗಿಯಾಗಬೇಕಾದರೆ, he has to declare his pecuniary interest ಎನ್ನುವ ಕಾನೂನು ಇದೆ. ನೀವು ವಕೀಲರಿದ್ದೀರಿ, ಇದು ನಿಮಗೂ ಗೊತ್ತಿದೆ ಅಧ್ಯಕ್ಷರೆ. ಈ ರೀತಿ ಆಗಿದ್ದರೆ ಖಂಡಿತವಾಗಿ ಅದರ ಬಗ್ಗೆ ಕೂಲಂಕಷವಾಗಿ ತನಿಖೆಯಾಗಬೇಕು ಮತ್ತು ಸೂಕ್ತ ಕ್ರಮವಾಗಬೇಕು. ಎರಡನೆಯದಾಗಿ, ಈ ನೆಮ್ಮದಿ ಕೇಂದ್ರಗಳನ್ನು ನಡೆಸತಕ್ಕಂಥ ವ್ಯವಸ್ಥೆಯನ್ನು ಸರ್ಕಾರದ ವತಿಯಿಂದ ಮಾಡಲಿಕ್ಕೆ ಸಾಧ್ಯವಿಲ್ಲವೇ ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕು. ಏಕೆಂದರೆ, ಇದರಲ್ಲಿ ಕೆಲವು ನ್ಯೂನತೆಗಳಿವೆ. ಇದಕ್ಕೆ ಸರಿಯಾದ control ಇಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮೊನ್ನೆ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುವಾಗ ಸಚಿವರಾದ ಉದಾಸಿಯವರು, we have given the control to Deputy Commissioner ಎಂದು ಹೇಳಿದರು. Deputy Commissioner ರವರಿಗೆ ಕೊಟ್ಟರೆ ಸಾಲದು. You have to make the Tahsildar as the nodal officer. ಯಾವುದೇ ಕಾರಣಕ್ಕೂ ಇದನ್ನು ಸರಿಪಡಿಸಲಿಕ್ಕೆ ಆಗುವುದಿಲ್ಲ, ಇದನ್ನು ಹೀಗೇ ಮುಂದುವರೆಸುತ್ತೇವೆ ಎಂದರೆ ಅದು ಸರ್ಕಾರಕ್ಕೆ ಬಿಟ್ಟದ್ದು. ಇದರಿಂದ ಜನರಿಗೆ ತೊಂದರೆಯಾಗುತ್ತಿದೆ. ಈ ಸರ್ಕಾರಕ್ಕೆ ಕೆಟ್ಟ ಹೆಸರು ಬೇಕಿದ್ದರೆ ನೀವು ಮಾಡಿಕೊಳ್ಳಿ. ಇದನ್ನು ಸರಿಪಡಿಸತಕ್ಕಂಥ ಅಧಿಕಾರವನ್ನು ತಹಶೀಲ್ದಾರರಿಗೆ ಕೊಡಬೇಕು. ಇನ್ನು, ನೆಮ್ಮದಿ ಕೇಂದ್ರಗಳಲ್ಲಿ Caste Certificate issue ಮಾಡುತ್ತಾರೆ. ಒಬ್ಬ ವಿದ್ಯಾರ್ಥಿಗೆ ಒಂದು ಸಾರಿ Caste Certificate issue ಮಾಡಿದರೆ, it is valid for 5 years ಎಂದು ಹೇಳಬೇಕು. ಅವರು ವರ್ಷ ವರ್ಷವೂ ಲೈನ್ ನಲ್ಲಿ ನಿಂತುಕೊಂಡು ಅದನ್ನು ಮತ್ತೆ ತೆಗೆದುಕೊಳ್ಳುವ ಅವಶ್ಯಕತೆ ಏನಿದೆ? ಸರ್ಕಾರ ಸ್ವಲ್ಪ common sense use ಮಾಡಬೇಕು. ಪ್ರತಿವರ್ಷ ಅಲ್ಲಿ ಸಾವಿರಾರು ವಿದ್ಯಾರ್ಥಿಗಳು ನಿಂತು ಮತ್ತೆ certificate ತೆಗೆದುಕೊಳ್ಳಬೇಕು ಎಂದಾದರೆ ಇದರಿಂದ ಎಷ್ಟು ತೊಂದರೆಯಾಗುತ್ತಿದೆ ಎನ್ನುವುದನ್ನು ಯೋಚನೆ ಮಾಡಬೇಕು. ಇದನ್ನು simplify ಮಾಡಲು ನಿಮಗೆ

ಆಗುವುದಲ್ಲವೇ? ಇಲ್ಲದಿದ್ದರೆ ಇದನ್ನು ಸರ್ಕಾರವೇ ನಡೆಸಲಿ. ನನಗೆ ಗೊತ್ತಿರುವ ಪ್ರಕಾರ, this software is one of the best in the country. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ತಾವು ತಂದಿರುವ ಪದ್ಧತಿಯು one of the best in the country, the software in one of the best in the country. But, why are you giving it to them? ನೀವು ಈ software accept ಮಾಡಿದಾಗ, ಇದನ್ನು ಇಂಥವರಿಗೇ ಕೊಡಬೇಕು ಎಂದೇನಾದರೂ condition ಇತ್ತೇ? ಇಲ್ಲ. ನೀವು ಒಂದು contract ಕೊಟ್ಟಿದ್ದಿರಿ, ಅದರಂತೆ ಯಾರೋ ನಿಮಗೆ ಒಂದು software prepare ಮಾಡಿ ಕೊಟ್ಟಿದ್ದಾರೆ, ಅದಕ್ಕೆ ನೀವು ಹಣ ಕೊಟ್ಟಿರುತ್ತೀರಿ. ಒಂದು ಪಹಣಿ ತೆಗೆದುಕೊಳ್ಳಬೇಕಾದರೆ 10 ರೂಪಾಯಿ ತೆಗೆದುಕೊಳ್ಳುತ್ತಾರೆ. ಆ 10 ರೂಪಾಯಿಯಲ್ಲಿ ಅವರಿಗೇನಾದರೂ share ಹೋಗುತ್ತಿದೆಯೇ? Was it a pre condition in preparing this software? ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ಅದು ಬಿಟ್ಟು ಮಂಜುಗಟ್ಟಿರತಕ್ಕಂಥ ರೀತಿಯಲ್ಲಿ ನೀವು ವ್ಯವಹಾರ ನಡೆಸಿದರೆ ಹೇಗೆ? ಇದರಿಂದ ಸಾರ್ವಜನಿಕರಿಗೂ ಕೂಡ ತೊಂದರೆಯಾಗುತ್ತಿರುವ ಈ ಸಂದರ್ಭದಲ್ಲಿ ಸರ್ಕಾರ intervene ಆಗಬೇಕಾಗುತ್ತದೆ. ಇದನ್ನು ಸರ್ಕಾರವೇ ತನ್ನ ಸ್ವಂತ ಸಿಬ್ಬಂದಿಗಳಿಂದ ನಡೆಸಲಿ. ನೀವು ಅವರಿಗೆ ಕೊಟ್ಟರೆ, ಸರಿಯಾಗಿರುವ safety measures ಮಾಡುವಾಗ ಇರಬೇಕು ಮತ್ತು ಸರಿಯಾಗಿರುವ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಇದು ನಡೆಯಲಿ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದರಂತೆ ಯಾವ I.A.S. officer ಇದರಲ್ಲಿ ಭಾಗಿಯಾಗಿದ್ದಾರೆ ಮತ್ತು K.T.T.P. Act violation ಆಗಿದ್ದರೆ ಅದಕ್ಕೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. Who is responsible for this? ನನಗೆ ತಿಳಿದ ಮಟ್ಟಿಗೆ ಇದು ರೆವಿನ್ಯೂ ಸಚಿವರಿಗೆ ಸಂಬಂಧಪಟ್ಟಿರುತ್ತದೆ. ಏಕೆಂದರೆ, ನೆಮ್ಮದಿ ಕೇಂದ್ರಗಳಿಂದ ವಿತರಣೆಯಾಗುತ್ತಿರುವ ಎಲ್ಲ ದಾಖಲೆಗಳು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟವುಗಳಾಗಿವೆ. ಹಾಗಿರುವಾಗ ಇದಕ್ಕೆ ಮುಖ್ಯ ಮಂತ್ರಿಗಳು ಏಕೆ ಉತ್ತರ ಕೊಡುತ್ತಾರೆ? Why Revenue Minister is not answering this queation? ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿ.ಎಂ. ಉದಾಸಿ : ಇದು ಕಂದಾಯ ಮಂತ್ರಿಗಳಿಗೆ ವರ್ಗಾವಣೆಯಾಗಿದೆ. ಅವರಿಂದಲೇ ಇದಕ್ಕೆ ಉತ್ತರ ಸಿಗುತ್ತದೆ.

ಡಾ: ಶರಣ ಪ್ರಕಾಶ್ ರುದ್ರಪ್ ಪಾಟೀಲ್ : ನಾವು ಕೇಳಿದಾಗ ಕಂದಾಯ ಸಚಿವರು, ಇದು ನನಗೆ ಗೊತ್ತಿಲ್ಲ, ಮುಖ್ಯಮಂತ್ರಿಗಳನ್ನು ಕೇಳಿ ಎಂದು ಹೇಳಿದರು. This was the reply the Revenue Minister has given on the floor of the House. Whether the Chief Minister can handle the file like piece meal, of other departments? This is very improper. No Chief Minister can do this. Whether the Chief Minister is intervening in the Revenuw Department? This is very bad. ಇದು ನನ್ನ ಇಲಾಖೆಗೆ ಬರುತ್ತದೆ, ಆದರೆ ಇದನ್ನು ಮುಖ್ಯಮಂತ್ರಿಗಳು handle ಮಾಡಿದ್ದಾರೆ, ಅವರನ್ನು ಕೇಳಿ ಎಂದು ಸಚಿವರು ಹೇಳಬಹುದೇ? Can he tell like this in the House? They have to give a responsible answer to this House. We seek protection from you. Because, we are talking in public interest. we don't have any personal interest in this. No minister can make irresponsible statements like this. And Chief Minister cannot answer for this. How Chief Minister is involved in this? What is the interest of the Chief Minister in this? This has to be clarified to the House. We cannot accept like this.

ಅಧ್ಯಕ್ಷರು : ಆಯಿತು, clarify ಮಾಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, Public and private participation is the order of the day. Public and private participation effective ಆಗಿ ನಡೆಯುತ್ತದೆ ಎನ್ನುವ ಉದ್ದೇಶವನ್ನಿಟ್ಟು ಕೊಂಡು ಇಂಥ ಯೋಜನೆಗಳು ಬಂದಿವೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಏನು ತೊಂದರೆಯಾಗುತ್ತಿದೆ ಎಂದರೆ, ಯಾರಾದರೂ ಒಬ್ಬ ರೈತ ಹೋಗಿ,. ಯಾವುದಾದರೂ ಒಂದು ವಿಚಾರದಲ್ಲಿ ಅರ್ಜಿ ಕೊಟ್ಟರೆ, ಅರ್ಜಿ ಕೊಟ್ಟ ತಕ್ಷಣ ಅವನಿಗೆ ಒಂದು check list ಹಾಕಿ ಕೊಡುತ್ತಾರೆ. ಅವನು ಅದನ್ನು ತೆಗೆದುಕೊಂಡು ಹೋಗಿ village accountant ಹತ್ತಿರ ಬರಸಿಕೊಂಡು ಮತ್ತೆ ವಾಪಸ್ಸು ತೆಗೆದುಕೊಂಡು ಬಂದು ತಾಲ್ಲೂಕು ಆಫೀಸಿಗೆ ಕೊಡಬೇಕು, ಆಮೇಲೆ ನೆಮ್ಮದಿ ಕೇಂದ್ರದಿಂದ ಅಗತ್ಯವಿರುವ ಕಾಫಿಯನ್ನು

ತೆಗೆದುಕೊಳ್ಳಬೇಕು. ಈಗ ಇವೆಲ್ಲವನ್ನೂ ರೈತನೇ ಮಾಡುತ್ತಿದ್ದಾನೆ. ಮೊದಲು ಏನಾಗುತ್ತಿತ್ತು ಎಂದರೆ, village accountant ಊರಿನಲ್ಲಿರುತ್ತಿದ್ದ, ಅಲ್ಲಿಗೆ ಹೋಗಿ ಅವನಿಂದ ಬರೆಸಿಕೊಳ್ಳುತ್ತಿದ್ದರು. 50 ರೂಪಾಯಿ ಕೊಟ್ಟರೆ ಬರೆದು ಕೊಡುತ್ತಿದ್ದನು. ಈಗ ಅವನಿಗೆ 50 ರೂಪಾಯಿ ಕೊಟ್ಟು, ಅವನು ಬರೆದು ಕೊಟ್ಟಮೇಲೆ ಅದನ್ನು ವಾಪಸ್ಸು ತೆಗೆದುಕೊಂಡು ಬಂದು ಕೊಟ್ಟು ಇಲ್ಲಿ ಮತ್ತೆ ದುಡ್ಡು ಕಟ್ಟಬೇಕು. ಇದರ concept ಏನಿತ್ತು ಎಂದರೆ, ಅರ್ಜಿ ಕೊಟ್ಟ ತಕ್ಷಣ ನೆಮ್ಮದಿ ಕೇಂದ್ರಗಳನ್ನು ನಡೆಸುತ್ತಿರುವಂಥ comat ಸಂಸ್ಥೆಯವರು ಇಲಾಖೆಯವರೊಂದಿಗೆ ಸ್ವತಃ ಸಂಬಂಧವಿಟ್ಟುಕೊಂಡು ಅವರೇ ಸ್ವತಃ ಕೊಡುವಂಥ ಒಂದು ಪದ್ಧತಿ ಇತ್ತು.

(8-20 PM)

ಈಗ ಹೀಗಿಲ್ಲ. ಅದು reverse ಆಗಿಹೋಗಿದೆ. ಇವನೇ ಅಂದರೆ ರೈತನೇ ಹಿಡಿದುಕೊಂಡು ಓಡಾಡಬೇಕಾದ ಪರಿಸ್ಥಿತಿ ಬಂದಿದೆ. ನಾನು ಹೀಗೆ ಏಕೆ ಹೇಳುತ್ತಿದ್ದೇನೆಂದರೆ, ಇವರು ಹಳ್ಳಿಗಳಲ್ಲಿ ಮಾಡಿರತಕ್ಕಂಥ ಅಪರಾಧಗಳು ಅನ್ಯಾಯಗಳು ಏನೇನು ಎಂಬುದನ್ನು ಬಹಶಃ ಇವತ್ತು ಹೇಳುವುದಕ್ಕಾಗುವುದಿಲ್ಲ. ಅಷ್ಟೊಂದು ಅವ್ಯಹಾರಗಳನ್ನು ಮಾಡಿದ್ದಾರೆ. Deputy Commissioner ರವರಿಗೆ complaint ಕೊಟ್ಟಿದ್ದಾರೆ, ತಹಶೀಲ್ದಾರ್‌ರವರಿಗೆ complaint ಮಾಡಿದ್ದಾರೆ, ಅವರ ಮೇಲೆ case ಹಾಕಬೇಕೆಂದು ಹೇಳಿದ್ದಾರೆ, ಆದರೂ ಏನೂ ಜಗ್ಗುತ್ತಿಲ್ಲ. ಏಕೆಂದರೆ, ಈ ವಿಚಾರ ಹಿಂದೆ Assembly ಯಲ್ಲಿ raise ಆಗಿತ್ತು, ನಾನು ಇದಕ್ಕೆ ಸಂಬಂಧಿಸಿದಂತೆ ಪತ್ರಿಕೆಯಲ್ಲಿ ವಿಚಾರವನ್ನು ಓದಿದ್ದೇನೆ. ಅದಕ್ಕೂ ನನಗೆ ಸಂಬಂಧವೇ ಇಲ್ಲ, ನನ್ನ family involve ಆಗಿಲ್ಲ ಎಂದು ಚಾವ್ಲಾ ಎನ್ನುವ ಒಬ್ಬ IAS ಅಧಿಕಾರಿ ಒಂದು ದೊಡ್ಡ statement ಮಾಡಿದ. ಕುಂಬಳಕಾಯಿ ಕಳ್ಳ ಎಂದು ಇಲ್ಲಿ ಯಾರೋ ಹೇಳಿದ್ದಕ್ಕೆ ಅವರು ಹೆಗಲು ಮುಟ್ಟಿ ನೋಡಿಕೊಂಡರು. Because of this involvement of these influential IAS officers ಈ ಯೋಜನೆಗಳು ಕೆಟ್ಟು ಹೋಗಿರುವುದು ನಿಜ, ಅವರಿಗೆ ಲಾಭವಾಗಿರುವುದೂ ನಿಜ. ಇದು ಕಂದಾಯ ಸಚಿವರಿಗೆ ಸಂಬಂಧಿಸಿದುದು ಎಂದಲ್ಲ, ಇಲಾಖೆ ಇರಬಹುದು. ದಯಮಾಡಿ ಈ ವಿಷಯವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದು

ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ನಾಳೆಯ ದಿವಸ ನಿಮ್ಮ ಸರ್ಕಾರಕ್ಕೆ ಏನಾದರೂ ಕೆಟ್ಟ ಹೆಸರು ಬಂತೆಂದರೆ ಇದು ಒಂದೇ ಕಾರಣದಿಂದ ಬರಬಹುದು, ದಯಮಾಡಿ ಅರ್ಥಮಾಡಿಕೊಳ್ಳಿ. ಇದನ್ನು ಮುಖ್ಯಮಂತ್ರಿ ಯವರ ಗಮನಕ್ಕೆ ತಂದು ಆ ಸಂಸ್ಥೆಯ ಮೇಲೆ ಏನಾದರೂ ಕೂಡ action ತೆಗೆದುಕೊಳ್ಳಬೇಕು ಅಥವಾ ತೆಗೆದುಹಾಕಬೇಕೇ ಅಥವಾ ಇನ್ನೇನಾದರೂ ಮಾಡಬೇಕೇ ಎನ್ನುವ ಬಗ್ಗೆ ಯೋಚನೆ ಮಾಡುವುದು ಸೂಕ್ತ ಎಂದು ಹೇಳುತ್ತೇನೆ. ಇದು ಕಂದಾಯ ಮಂತ್ರಿಯವರೊಬ್ಬರಿಗೆ ಸೀಮಿತವಾದುದಲ್ಲ. ಇದು DPAR ಗೆ ಬರುತ್ತದೆ. DPAR Comes under the Chief Minister. It is a major policy decision. ಅದಕ್ಕಾಗಿ ಮುಖ್ಯಮಂತ್ರಿ ಯವರ ಜೊತೆ ಚರ್ಚೆ ಮಾಡಿ ಅಥವಾ ಸಚಿವಸಂಪುಟದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿ ಅದಕ್ಕೇನಾದರೂ ಇತಿಶ್ರೀ ಹಾಡುವುದು ಒಳ್ಳೆಯದು. Voter list ನಲ್ಲಿ ನನ್ನ Photo ತೆಗೆಸಿದ್ದೆ. ನಾನು vote ಹಾಕುವುದಕ್ಕೆ ಹೋದಾಗ ನನ್ನ photo ಇರಲಿಲ್ಲ. ಹೀಗೆ ಏಕೆ ಎಂದು ಕೇಳಿದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೊನೆಗೆ ಯಾವುದೋ photo ಹಿಡಿದುಕೊಂಡು Vote ಹಾಕುವುದಕ್ಕೆ ಹೋದಾಗ ಜನ ತಪ್ಪು ತಿಳಿದುಕೊಳ್ಳ ಬಾರದೆಂದು ನಾನು ನನ್ನ identity card ತೆಗೆದುಕೊಂಡು ಹೋಗಿ vote ಹಾಕುವಂಥ ಪರಿಸ್ಥಿತಿ ಬಂತು. ನಮಗೇ ಹೀಗೆ ಮಾಡುತ್ತಾರೆಂದರೆ ಜನಸಾಮಾನ್ಯರ ಗತಿ ಏನು? ಮಾನ್ಯ ಕಂದಾಯ ಸಚಿವರೆ ಚಾವ್ಲಾ ಎನ್ನುವ IAS ಅಧಿಕಾರಿ ಈ ಸಂಸ್ಥೆಯ ಹಿಂದೆ ಇರುವುದು ನಿಮಗೆ ಗೊತ್ತಿದೆಯೇ?

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) : ಅಧಿಕಾರಿಗಳು ಯಾರಾದರೂ ಈ COMAT ಸಂಸ್ಥೆಯ ಹಿಂದೆ ಇದ್ದಾರೆಂದರೆ ಮಾನ್ಯ ಸದಸ್ಯರು you have to prove it. ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಅಪ್ಪಚ್ಚು ರಂಜನ್‌ರವರು ಪ್ರಶ್ನೆ ಕೇಳಿ ಅದಕ್ಕೆ ಸಿಕ್ಕಿದ ಉತ್ತರ ತೃಪ್ತಿಯಾಗ ದಿರುವ ಕಾರಣ ತಾವು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇವತ್ತು ನೆಮ್ಮದು ಯೋಜನೆ ವಿಚಾರದಲ್ಲಿ ಬಹಳಷ್ಟು ಸದಸ್ಯರು ಮಾತನಾಡಿದ್ದು ಅವರು ಏನೇನು ಮಾತನಾಡಿದ್ದಾರೆನ್ನುವುದು ಗೊತ್ತಿದೆ. ನೆಮ್ಮದಿ ಕೆಡಿಸಿದ ನೆಮ್ಮದಿ ಕೇಂದ್ರಗಳು ಎಂದು paper heading ನಲ್ಲಿ ಬಂದಿರುವಂಥದ್ದು, ತಮ್ಮ ವಿಚಾರದಲ್ಲಿ ಕೂಡ ಅದೇ ಸಮಸ್ಯೆ ಇದೆ.

ಶ್ರೀಸಾಮಾನ್ಯರಿಗೆ ಮುಖ್ಯವಾಗಿ ಗ್ರಾಮೀಣ ಜನತೆಗೆ ಒಳ್ಳೆಯ ಸೌಲಭ್ಯ ಕೊಡಿಸಬೇಕು, ಅವರು ತಾಲ್ಲೂಕು ಕೇಂದ್ರಗಳಿಗೆ ಸುಮಾರು 100–150 ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬಂದು ಅದಕ್ಕಾಗಿ ಕಾದು ಅರ್ಜಿ ಕೊಟ್ಟು ಮಾಡುವುದು ಬೇಡವೆಂದು ಈ ಕೇಂದ್ರವನ್ನು ನಿರ್ಮಿಸಲಾಗಿದೆ. ಅದೂ ಕೂಡ ಕೇಂದ್ರ ಸರ್ಕಾರ ಆ ಕಂಪನಿಯವರಿಗೆ 5000 centres ಅನ್ನು ತೆರೆಯಲಿಕ್ಕೆ ಹೇಳಿದ್ದರು. ಆದರೆ, ಇವತ್ತು 800 ಕೇಂದ್ರಗಳನ್ನು ತೆರೆದಿದ್ದು ಅವು ನಡೆಯುತ್ತಿವೆ. 2006ನೇ ಇಸವಿಯಲ್ಲಿ ಆ ಕಂಪನಿಯವರಿಗೆ 5 ವರ್ಷದ ಕಾಲಕ್ಕಾಗಿ ಈ ರೀತಿ ಇಂತಿಂಥ certificate ಗಳು, ಅದರಲ್ಲಿ ಕಂದಾಯ ಇಲಾಖೆಯದೇ ಜಾಸ್ತಿ ಬರುತ್ತದೆ. ಸುಮಾರು 43 ಕ್ಕಿಂತೂ ಹೆಚ್ಚು ಕಾಗದಪತ್ರಗಳನ್ನು ವಿತರಣೆ ಮಾಡುವ ಕೆಲಸ ಆ ಕೇಂದ್ರಗಳಿಂದ ಮಾಡಬೇಕು. ಅದು e-Governance ಕೆಳಗಡೆ ಬರುತ್ತದೆ. ಜೊತೆಗೆ ಇತರೆ ಇಲಾಖೆಗಳ certificates ಇರಬಹುದು, transactions ಇರಬಹುದು ಅದನ್ನು ಕೂಡ ಆ ಸಂಸ್ಥೆಯ ಮೂಲಕ ಮಾಡಬೇಕೆನ್ನುವ ಒಳ್ಳೆಯ ಉದ್ದೇಶ ದಿಂದ ಇದನ್ನು ಸರ್ಕಾರ ಪ್ರಾರಂಭ ಮಾಡಿತ್ತು. ಯಾವುದೇ ಒಂದು ಹೊಸ ವಿಚಾರ ಪ್ರಾರಂಭ ಮಾಡಿದಾಗ ಅನೇಕ ಸಮಸ್ಯೆಗಳು ಬರುತ್ತವೆ. 'ಭೂಮಿ' –ಪಹಣಿ ವಿಚಾರದಲ್ಲಿ ಅದನ್ನು ಮೊದಲ ಮಾಡಬೇಕಾದಾಗ ಬಹಳ ತೊಂದರೆಯಾಯಿತು. ಆದರೆ, ಆ ತೊಂದರೆಗಳೆಲ್ಲ ನಿವಾರಣೆಯಾಗಿ success ಆದಮೇಲೆ ಇಡೀ ದೇಶ ನಮ್ಮ ಕರ್ನಾಟಕದ ಮೇಲೆ ಮೆಚ್ಚುಗೆ ವ್ಯಕ್ತಪಡಿಸುತ್ತಿದೆ. ನಮ್ಮ e-Governance performance ಗೆ ಕೇಂದ್ರ ಸರ್ಕಾರ award ಕೂಡ ಕೊಟ್ಟಿದೆ. ಅದೇ ರೀತಿ ಇದು ಹೊಸ ಪ್ರಯೋಗವಾಗಿರುವು ದರಿಂದ 'ನೆಮ್ಮದಿ ಕೇಂದ್ರ'ಗಳಲ್ಲೇನು ಅರ್ಜಿಗಳನ್ನು ಕೊಡುತ್ತಾರೆ., ಆ ಅರ್ಜಿಗಳ pendency ಆಗಿರಬಹುದು, ಅಲ್ಲಿಯ performance ಇರಬಹುದು, ವಿದ್ಯುತ್ problem ಆಗಿರಬಹುದು. ಇವತ್ತು ವಿದ್ಯುತ್ problem general ಆಗಿರುವ ಸಮಸ್ಯೆಯಾಗಿದೆ.

ಅಧ್ಯಕ್ಷರು : ಅದರ ನ್ಯೂನತೆಗಳು ಹೇಗಿವೆ ಎಂದರೆ ಈಗ ನಮ್ಮಲ್ಲಿ ಕಾಫಿ ಬೆಳೆ ಬೆಳೆಯುತ್ತೇವೆ. 'ಕಾಫಿ' ಎಂದು RTC ಕೇಳಿದರೆ ಅದು blank ಆಗಿ ಬರುತ್ತದೆ. ಇದನ್ನು ಹೇಗೆ ಸರಿಪಡಿಸುವುದು?

O.31 F-35

ಶ್ರೀ ಜಿ.ಕರುಣಾಕರರೆಡ್ಡಿ : ಈಗ ತಾವೇನು ಹೇಳಿದಿರಿ, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಅದೆಲ್ಲ ಬಹಳಷ್ಟು ಚೆನ್ನಾಗಿ ನಡೆಯುತ್ತಿದೆ ಎಂದು ನಾನು ಸರ್ಕಾರದ ಪರವಾಗಿ ಹೇಳುತ್ತಿಲ್ಲ. ಅದರಲ್ಲಿ problems ಇದೆ. ಹೊಸ ಪ್ರಯೋಗದಲ್ಲಿ ಏನೇನು outcomes ಬಂದಿದೆ, ಮೊದಲು ಇದರಲ್ಲಿ ಬಹಳಷ್ಟು ಸಮಸ್ಯೆ ಇತ್ತು, ಅದು control ಗೇ ಸಿಗುತ್ತಿರಲಿಲ್ಲ. ಅದಕ್ಕೆ e-Governance Secretary ಯವರು ಜಿಲ್ಲಾಧಿಕಾರಿಯವರಿಗೆ ಅಧಿಕಾರ ಕೊಟ್ಟು ನೆಮ್ಮದಿ ಕೇಂದ್ರದಲ್ಲಿ stationary ಯಿಂದ ಹಿಡಿದು generator ಬೇಕಾಗಿದ್ದರೆ generator ವ್ಯವಸ್ಥೆ ಆಗಿರಬಹುದು, ಪ್ರತಿಯೊಂದು ವಿಚಾರದಲ್ಲಿ care ತೆಗೆದುಕೊಂಡು ಅವರಲ್ಲೇನಾದರೂ ತಪ್ಪುಗಳಾದರೆ ಕ್ರಮ ಜರುಗಿಸಿ, ಅವರನ್ನು ತೆಗೆದು ಹಾಕಿ ಹೊಸಬರನ್ನು appointment ಮಾಡುವುದಕ್ಕೆ ನಾವು circular ಕೂಡ ಹೊರಡಿಸಿದ್ದೇವೆ. ಆದ್ದರಿಂದ, ಇದರಲ್ಲಿ ಎಲ್ಲಾ ಸುಧಾರಣೆಯಾಗಿದೆ ಎಂದು ಹೇಳುತ್ತಿಲ್ಲ. ಅದರಿಂದಾಗಿ ಏನೇನು ಸಮಸ್ಯೆಗಳಿವೆ ಎನ್ನುವುದು ಗೊತ್ತಾಗಿದೆ. ಅವುಗಳನ್ನು ಸರಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈ power ಸಮಸ್ಯೆ ಇದ್ದದ್ದೇ. ಅದಕ್ಕೋಸ್ಕರ ಪ್ರಾಯೋಗಿಕವಾಗಿ 5 ಕೇಂದ್ರಗಳಲ್ಲಿ Solar power ಅನ್ನು ಅಳವಡಿಸಿ ಪ್ರಯೋಗ ಮಾಡಿದ್ದೇವೆ. Power back up ಎಲ್ಲಾ ಬಹಳ ಚೆನ್ನಾಗಿತ್ತು. ನಾನು ಕಂದಾಯ ಸಚಿವನಾದ ಮೇಲೆ ಪ್ರಾದೇಶಿಕ ಆಯುಕ್ತರ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳ, ತಹಶೀಲ್ದಾರರ, ಎ.ಸಿ. ಗಳ ಸಭೆ ನಡೆಸಿದಾಗ ನಾನು ಕಟ್ಟುನಿಟ್ಟಾಗಿ ಸೂಚನೆ ಕೊಟ್ಟು, backlog ಹುದ್ದೆಗಳು ಸುಮಾರು 120–130 ಇದ್ದುವು, ಆ ಹುದ್ದೆಗಳನ್ನು ತಕ್ಷಣ fill up ಮಾಡಬೇಕೆಂದು ಸೂಚನೆ ಕೊಟ್ಟಿದ್ದೆ. ಅದರಂತೆ ಆ ಬಗ್ಗೆ ಕ್ರಮ ಜರುಗಿಸಿ ಸುಮಾರು 200 ಕಡೆ backlog ಹುದ್ದೆಗಳನ್ನು ತುಂಬಿದ್ದಾರೆ. ಇದನ್ನು ಯಾವ ರೀತಿ improvement ಮಾಡಬೇಕೆಂಬುದನ್ನು ಕೂಡ ನಾವು ನೋಡಬೇಕಾಗುತ್ತದೆ. 2006ನೇ ಇಸವಿಯಲ್ಲಿ ವಿದ್ಯಾರ್ಥಿ ವೇತನ ಇರಬಹುದು, ಜಾತಿ, ಆದಾಯ, ಮುಂತಾದ ಪ್ರಮಾಣ ಪತ್ರಗಳು 24,185 ಇತ್ತು. 2007–08 ಅಂದರೆ ಕೇವಲ ಒಂದು ವರ್ಷದಲ್ಲಿ 12 ಲಕ್ಷದ 42 ಸಾವಿರದ 440 ಅರ್ಜಿಗಳು ವಿಲೇವಾರಿಯಾಗಿವೆ. ಅದೇ ರೀತಿ, 2008ರಲ್ಲಿ 20 ಲಕ್ಷದ 88 ಸಾವಿರದ 912 ಅರ್ಜಿಗಳು ವಿಲೇವಾರಿಯಾಗಿವೆ. 2009ರಲ್ಲಿ 66 ಲಕ್ಷದ 44 ಸಾವಿರದ 250

ಅರ್ಜಿಗಳು ವಿಲೇವಾರಿಯಾಗಿವೆ. ಅದೇ ರೀತಿ, RTC ಗಳ ಬಗ್ಗೆ ಹೇಳುವುದಾದರೆ, ನೆಮ್ಮದಿ ಕೇಂದ್ರದಿಂದ 2006ನೇ ಇಸವಿಯಲ್ಲಿ 5 ಲಕ್ಷದ 40 ಸಾವಿರ ಇದ್ದದ್ದು, 2007ನೇ ಇಸವಿಯಲ್ಲಿ 57 ಲಕ್ಷವಾಯಿತು. ಅಂದರೆ, ಸುಮಾರು 11-12 times ಜಾಸ್ತಿಯಾಯಿತು. 2008ನೇ ಇಸವಿಯಲ್ಲಿ 80 ಲಕ್ಷದ 75 ಸಾವಿರ ಆಯಿತು. 2009ನೇ ವರ್ಷದಲ್ಲಿ 1 ಕೋಟಿ 77 ಸಾವಿರ delivery ಆಗಿದೆ. 2010ನೇ ಜನವರಿ ಅಂದರೆ ಒಂದು ತಿಂಗಳಲ್ಲಿ 9 ಲಕ್ಷದ 15 ಸಾವಿರ ಆಗಿದೆ. ಅಂದರೆ, performance, delivery of duty ಯಲ್ಲಿ improvement ಕಾಣಿಸುತ್ತದೆ. ಆದರೆ, ಕೆಲವು ನ್ಯೂನತೆಗಳಿವೆ. ಅಂದರೆ, ಆ office ಸರಿಯಾಗಿ, ವ್ಯವಸ್ಥಿತವಾಗಿಲ್ಲ. Power problem ಇದೆ, ಅರ್ಜಿಗಳನ್ನು ಕೊಟ್ಟರೆ 15 ದಿನಗಳಾದರೂ ಅದು clear ಆಗುವುದಿಲ್ಲ ಎನ್ನುವ ದೂರು ಇದೆ. ಏನಾಗುತ್ತದೆಂದರೆ, ನಾವೇನೇ ಅರ್ಜಿಗಳನ್ನು ಕೊಟ್ಟರೆ, ಅವುಗಳನ್ನು receive ಮಾಡಿಕೊಂಡು ಸಂಬಂಧಪಟ್ಟ department ಗಳಿಗೆ ಕಳುಹಿಸುತ್ತಾರೆ. ತಹಶೀಲ್ದಾರ್‌ಗಳ ಹತ್ತಿರ ಸಾವಿರಗಟ್ಟಲೆ ಅರ್ಜಿಗಳು pendency ಇದೆ. R.I. ಹತ್ತಿರ, V.A., ಹತ್ತಿರ pendency ಇದೆ. ಏಕೆಂದರೆ, ವೃದ್ಧಾಪ್ಯ ವೇತನ, ಜಾತಿ ಪ್ರಮಾಣ ಪತ್ರವಿರಬಹುದು ಇಂಥ ಅರ್ಜಿಗಳನ್ನು ಕೊಟ್ಟರೆ ಅದನ್ನು scrutiny ಮಾಡಬೇಕಾಗುತ್ತದೆ. ಅದನ್ನು ಆ Village Accountant ಹೋಗಿ check ಮಾಡಬೇಕಾಗುತ್ತದೆ. ಅದೆಲ್ಲ ಮಾಡಿಕೊಂಡು ಮತ್ತೆ re-report ತಹಶೀಲ್ದಾರ್‌ರವರಿಗೆ ಬಂದು, ಅಲ್ಲಿ backlog clearance ಆದಮೇಲೆ ಇಲ್ಲಿ issue ಮಾಡುತ್ತಾರೆ. ಅದರ ಬಗ್ಗೆ ಕೂಡ ನಾನು ಕಾರ್ಯದರ್ಶಿಗಳಿಗೆ ಸೂಚನೆ ಕೊಟ್ಟಿದ್ದೇನೆ. ನಮ್ಮ ಕಂದಾಯ ಇಲಾಖೆಯಲ್ಲಿ ಕೂಡ 15 ದಿನಗಳ deadline ಇದೆ. ನೆಮ್ಮದಿ ಕೇಂದ್ರಗಳಿಂದ ಅರ್ಜಿಯನ್ನು receive ಮಾಡಿ ನಿಮಗೆ ಮುಟ್ಟಿದ ತಕ್ಷಣ 15 ದಿನಗಳ ಕಾಲಮಿತಿ ಹಾಕಿಕೊಂಡು ಆ ಅರ್ಜಿಗಳನ್ನು clear ಮಾಡಿ ಮತ್ತೆ ಅವರಿಗೆ ಕೊಡಬೇಕು. ಮಂಗಳೂರು ಜಿಲ್ಲಾಧಿಕಾರಿಗಳು ಈ ವಿಚಾರದಲ್ಲಿ ಬಹಳಷ್ಟು interest ತೋರಿಸಿ ಈ ಅರ್ಜಿಗಳ clearance ಎಷ್ಟು ಬೇಗ ಮಾಡಬಹುದೆನ್ನುವುದಕ್ಕೆ ಅವರೇನು ಮಾಡಿದ್ದಾರೆಂದರೆ, ಬಂಟ್ವಾಳ ಮತ್ತು ಮಂಗಳೂರು ಈ ಎರಡು ತಾಲ್ಲೂಕುಗಳಲ್ಲಿ ಒಂದು experiment ಮಾಡಿದ್ದಾರೆ. ಅಂದರೆ, ಪ್ರತಿಯೊಂದು

ಮನೆಯ data ಅಂದರೆ ಅವರ ಕುಲವೇನು, ಅವರೇನು ಕೆಲಸ ಮಾಡುತ್ತಾರೆ, with age ಆ ರೀತಿಯ ಎಲ್ಲಾ information collect ಮಾಡಿ ಅವರ centre ನಲ್ಲಿ ಇಟ್ಟಿದ್ದಾರೆ. ಆ ಮಾಹಿತಿಗಳನ್ನು software ತರಹ ಮಾಡಿ ಇಟ್ಟಿದ್ದಕ್ಕೆ ಯಾರೇ ಆಗಲಿ ಅರ್ಜಿ ಕೊಟ್ಟರೆ ಕೇವಲ 5–10 ನಿಮಿಷಗಳಲ್ಲಿ ಅವರಿಗೆ deliver ಆಗುತ್ತದೆ. 15 ದಿನಗಳ process ಇಲ್ಲ, ತಿಂಗಳಗಟ್ಟಲೆ delay ಆಗುವುದನ್ನು ಕಟ್ ಮಾಡಿ ಕೂಡಲೇ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಮಂಗಳೂರಿನಲ್ಲಿ ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಎಲ್ಲಾ ಜಿಲ್ಲೆಗಳಿಗಿಂತ ಅತೀ ಕಡಿಮೆ pendency ಇರುವ ಹಾಗೆ ಮಾಡಿದ್ದಾರೆ, ಅದನ್ನು ನಾನು ನೋಡಿದ್ದೇನೆ.

ನಾನು ಅದಕ್ಕೆ ಏನು ಮಾಡಿದ್ದೇನೆಂದರೆ, e-Governance Secretary ಮತ್ತು ನಮ್ಮ Secretary ಗೂ ಹೇಳಿದ್ದೇನೆ, ಎಲ್ಲಾ ಜಿಲ್ಲಾಧಿಕಾರಿಗಳನ್ನು ಕರೆದು ಒಂದು ಒಂದು ಮೀಟಿಂಗ್ ಮಾಡೋಣ ಎಂದು ಹೇಳಿದ್ದೇನೆ. ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಪ್ರಯೋಗ ಮಾಡಲು ಏನು ಖರ್ಚಾಗಿದೆ, ಆ ಖರ್ಚನ್ನು ನಮಗೆ ತಿಳಿಸಿ immediate ಆಗಿ ಅದನ್ನು ಕೊಡಿಸುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಅದೇ ರೀತಿ ಇಡೀ ರಾಜ್ಯದಲ್ಲಿ ಪ್ರತಿ ಜಿಲ್ಲಾ ಕೇಂದ್ರ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ pilot project ಆಗಿ ತೆಗೆದುಕೊಂಡು ಈ data ವನ್ನು ನಾವು Plan ಮಾಡೋಣ. ಅದಾದಮೇಲೆ very immediately ಜಿಲ್ಲಾದ್ಯಂತ ಅಂದರೆ ರಾಜ್ಯಾದ್ಯಂತ ಆ data collect ಮಾಡಿಕೊಂಡರೆ next ಯಾರಾದರೂ ಜಾತಿ certificate ಕೇಳಲಿ income certificate ಕೇಳಿ, ಯಾವುದೇ certificate ಕೇಳಿ, ಅವರ ಮನೆಯ ಪೂರ್ಣ ಮಾಹಿತಿ ನಮ್ಮ ಬಳಿ ಇರುವುದರಿಂದ ಅದನ್ನು ಸುಲಭವಾಗಿ ಕೊಡಲಿಕ್ಕಾಗುತ್ತದೆ. ಆ ಮಾಹಿತಿ ಮುಂದೆ ಕೂಡ ಬಹಳಷ್ಟು ಉಪಯೋಗವಾಗುತ್ತದೆ. ಆದ್ದರಿಂದ, ಅವರಿಗೆ ಇನ್ನೂ ಒಂದು ವರ್ಷ contract ಇದೆ. ಅಷ್ಟರೊಳಗಡೆ power ವಿಚಾರದಲ್ಲಿ ನಾವು ಯಾವ ರೀತಿ address ಮಾಡಬೇಕು ಎಂಬ ಬಗ್ಗೆ ಯೋಚಿಸಬೇಕಾಗಿದೆ. ಇವತ್ತು ನಾವು ನಿರಂತರ ಜ್ಯೋತಿ ಕಾರ್ಯಕ್ರಮ ಮಾಡುತ್ತಿದ್ದೇವೆ, ರಾಜ್ಯದಲ್ಲಿ ಸುಮಾರು 130 ತಾಲ್ಲೂಕುಗಳಲ್ಲಿ ಈಗ ಮಾಡುತ್ತಿದ್ದಾರೆ. ಅದು ಇನ್ನೊಂದು 5–6 ತಿಂಗಳಲ್ಲಾದರೂ ನಿರಂತರ ಜ್ಯೋತಿಯ power connection ಅನ್ನು

ನೆಮ್ಮದಿ ಕೇಂದ್ರಗಳಿಗೆ ಕೊಟ್ಟರೆ ಅದೊಂದು solve ಆಗುತ್ತದೆ ಅಥವಾ solar system energy ಯನ್ನು ಅಳವಡಿಸಲು ಒಂದೊಂದು centre ಗೆ ಸುಮಾರು 1 ಲಕ್ಷದ 10 ಸಾವಿರ ರೂ. ಬೇಕಾಗುತ್ತದೆಂದು ಹೇಳಿದ್ದಾರೆ. ಅದನ್ನಾದರೂ plan ಮಾಡಿ current problem ಅನ್ನು solve ಮಾಡಿದರೆ major problem close ಆಗುತ್ತದೆ. ಅಂದರೆ ಈ 5 ವರ್ಷದಲ್ಲಿ ಏನೇನು complaints ಬಂದಿವೆ ಎಂದರೆ ಆ centers ಗೆ ಹೋದಾಗ ಕುಳಿತು ಕೊಳ್ಳಲಿಕ್ಕೆ ಸರಿಯಾದ hospitality ಇಲ್ಲ, ಕೂರಿಸುವ ವ್ಯವಸ್ಥೆ ಇಲ್ಲ, ಅಲ್ಲಿರುವ staff ಗೆ ಸರಿಯಾದ training ಇಲ್ಲ ಎನ್ನುವ ಈ ಎಲ್ಲಾ ಸಮಸ್ಯೆಗಳಿವೆ. ಮುಂದೆ ಅವುಗಳಿಗೆಲ್ಲ ನಾವು ಎಚ್ಚರವಹಿಸಲು ಈಗಿನಿಂದಲೇ planning ಮಾಡಿಕೊಂಡು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ನಮ್ಮ ಅಧಿಕಾರಿಗಳು ಕೂಡ ಕೇಳುತ್ತಿದ್ದಾರೆ. ಇವತ್ತಿನಿಂದಲೇ plan ಮಾಡಿ ಯಾವ್ಯಾವ ಸಮಸ್ಯೆಗಳು ಇವೆ ಅವುಗಳನ್ನು ಪರಿಹರಿಸಬೇಕಾಗಿದೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರಶ್ನೆ ಕೇಳಿದಾಗ ಅದಕ್ಕೆ last week ನಲ್ಲಿ ಮಾನ್ಯ ಉದಾಸಿಯವರು ಉತ್ತರ ಕೊಟ್ಟಿದ್ದಾರೆ. ಆಡಳಿತ, ವಿರೋಧ ಪಕ್ಷ ಎನ್ನುವ ಭೇದಭಾವವಿಲ್ಲದೆ, ಸಭಾಧ್ಯಕ್ಷರು ಸಹ ಈಗ problems ಹೇಳಿದರು, ಈ ರೀತಿ ಎಲ್ಲರ ಎಲೆಯಲ್ಲೂ ಈ ನೆಮ್ಮದಿ ಕೇಂದ್ರದಿಂದ ಬಹಳಷ್ಟು ತೊಂದರೆಯಾಗುತ್ತಿದೆ ಎನ್ನುವ ಭಾವನೆ ಇದೆ. ಇದು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಹೋಗಬೇಕೆಂಬುದು ಸರ್ಕಾರದ ಚಿಂತನೆ ಇದೆ. ನಾನು ಸಚಿವನಾಗಿ ಬಂದಕೂಡಲೆ, 5600 ಗ್ರಾಮ ಪಂಚಾಯಿತಿಗಳಲ್ಲಿ ಈ ನೆಮ್ಮದಿ ಕೇಂದ್ರಗಳನ್ನು ತೆಗೆದುಕೊಂಡು ಹೋಗುತ್ತೇವೆಂದು statement ಕೊಟ್ಟೆ. ಏಕೆಂದರೆ, ಜನರಿಗೆ ನಾವು ಇನ್ನೂ ಹತ್ತಿರವಾಗಿ ಸೇವೆ ಕೊಡಬೇಕು. ನಾನು ಎರಡು ಮೂರು ಸಲ ಸಭೆ ಮಾಡದೆ. ಆಗ ಅವರು ನಮಗೆ income ನಲ್ಲಿ ಸ್ವಲ್ಪ ಕಷ್ಟವಾಗುತ್ತಿದೆ. ಕೇವಲ ಇದೇ revenue services ಅಥವಾ 2–3 ಇಲಾಖೆಗಳ services ಮಾಡಿದರೆ ಕಷ್ಟವಾಗುತ್ತದೆಂದು ಹೇಳಿದ್ದಾರೆ. ಬಸ್ ಟಿಕೆಟ್ ವಿಚಾರವಾಗಿರಬಹುದು, power bills ಆಗಿರಬಹುದು, telephone bills ಆಗಿರಬಹುದು, ಏನೇನು sources ಇದೆ, ಅದನ್ನೆಲ್ಲಾ ಆ ಗ್ರಾಮದ ವ್ಯಾಪ್ತಿಯ ಜನರು ಉಪಯೋಗ ಮಾಡುವಂಥವರು

ಅದನ್ನು ಕಟ್ಟುವಂಥ ಒಂದು ವ್ಯವಸ್ಥೆಯಾದರೆ ಅವರಿಗೆ ಸ್ವಲ್ಪ income withstand ಆಗಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, ನೆಮ್ಮದಿ ಕೇಂದ್ರ ಗಳನ್ನು ನಾವು improve ಮಾಡಬಹುದು. ಈ ರೀತಿ ಪ್ರತಿ ಜಿಲ್ಲೆಯಲ್ಲಿ ಪ್ರತಿಯೊಂದು ಮನೆಯ data collect ಮಾಡಿಟ್ಟುಕೊಂಡರೆ services ಬಹಳಷ್ಟು ಸರಳವಾಗುತ್ತದೆ. ಅದರಿಂದ ಮುಂದೆ ನೆಮ್ಮದಿ ಕೇಂದ್ರದಲ್ಲಿ ಸಮಸ್ಯೆ ಇಲ್ಲದ ಹಾಗೆ ಜನ ನೆಮ್ಮದಿಯಾಗಿ ಅದರ services ಪಡೆದುಕೊಳ್ಳುವುದಕ್ಕೆ ಸರ್ಕಾರ ಬಹಳ ಕಟ್ಟುನಿಟ್ಟಾಗಿ ಅದರ ಬಗ್ಗೆ ಗಮನಹರಿಸುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಇದನ್ನು ಸರ್ಕಾರದ ವತಿಯಿಂದಲೇ ನಡೆಸಲಿಕ್ಕೆ ಪ್ರಯತ್ನ ಮಾಡಲಿಕ್ಕೇನು ತೊಂದರೆ ಇದೆ? ನೆಮ್ಮದಿ ಕೇಂದ್ರವನ್ನು ತೆರೆದ ಉದ್ದೇಶ ನಮಗರ್ಥವಾಯಿತು. ಅಲ್ಲಿಗೆ immediate ಹೋದ ಕೂಡಲೇ ಯಾವುದೇ ಪ್ರಮಾಣಪತ್ರ 24 ಗಂಟೆಯೊಳಗೆ ಸಿಗಬೇಕು ಎನ್ನುವ ಉದ್ದೇಶದಿಂದ ಮಾಡಿದ್ದೀರಿ. ಆದರೆ, ಆ ನೆಮ್ಮದಿ ಕೇಂದ್ರದಿಂದ RTC ತೆಗೆದುಕೊಂಡರೆ ಪುನಃ Village Accountant, Revenue Inspector ರವರೇ ತಹಶೀಲ್ದಾರ್‌ರವರ ಹತ್ತಿರ ಸೀಲು, ಸಹಿ ಹಾಕಿಸುವುದಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ಅವರು ಸೀಲು, ಸಹಿ ಹಾಕಿದರೆ ಮಾತ್ರ ಅದನ್ನು ಬ್ಯಾಂಕ್‌ನವರು Validity ಎಂದು consider ಮಾಡುತ್ತಾರೆ. ಅದರಿಂದ ತೊಂದರೆಯಾಗುತ್ತದೆ. ಅದನ್ನು ಹೋಬಳಿ ಮಟ್ಟದಲ್ಲಿಯೇ ಮಾಡುವುದು ಬಹಳ ಒಳ್ಳೆಯದೆಂದು ನನ್ನ ಅಭಿಪ್ರಾಯ. ಇದನ್ನು ಸರ್ಕಾರವೇ ವಹಿಸಿ ಕೊಂಡರೆ ಬಹಳ ಒಳ್ಳೆಯದು. ಸರ್ಕಾರಕ್ಕೂ ಆದಾಯ ಬರುತ್ತದೆ. ಆ ದೃಷ್ಟಿಯಿಂದ ಚಿಂತನೆ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ಕಂದಾಯ ಸಚಿವರೇ, ತಮ್ಮ ಇಲಖೆಗೆ ಸಂಬಂಧಪಟ್ಟ ಹಾಗೆ; ನೆಮ್ಮದಿ ಕೇಂದ್ರದಿಂದ ಏನು ಅನುಕೂಲತೆ ಗಳಿವೆ ಎನ್ನುವುದರ ಬಗ್ಗೆ ತಾವು ಹೇಳಿದಿರಿ. ನಾನು ಮಾತನಾಡಿದಾಗ ತಾವು ಸದನದಲ್ಲಿ ಇರಲಿಲ್ಲವೆಂದು ಈಗ ಪುನಃ ಹೇಳಬಯಸುತ್ತೇನೆ. APL, BPL cards ಹಂಚುವುದರಲ್ಲೇನು ತೊಂದರೆಯಾಗಿದೆ, biometric system ತರಬೇಕೆಂದು ತಾವು ಹೊರಟಿದ್ದಿರಿ, ಇವತ್ತು ಆ thumb impressions tally ಆಗದೆ ಹೇಗೆ ಬಂತೋ ಹಾಗೆಯೇ ಆ cards issue ಆಗಿವೆ. ಕೆಲವು ಜಿಲ್ಲೆಗಳಲ್ಲಿ BPL cards 110-115% issue ಆಗಿವೆ. APL, BPl cards

ಸೇರಿಸಿದರೆ 170–180% issue ಆಗಿವೆ! Thumb impression ಹಾಕಿದರೆ tally ಆಗದಿರುವುದರಿಂದ ಅಲ್ಲಿ ಗೊಂದಲವಾಗಿದೆ. ಇದನ್ನೆಲ್ಲ ಅವರು mess ಮಾಡಿಟ್ಟಿದ್ದಾರೆ. ಇದಕ್ಕೇನು ಮಾಡಬೇಕೆನ್ನುವುದರ ಬಗ್ಗೆ ಕೂಡ ತಾವು ಸಲಹೆ ಕೊಡಬೇಕು. ಇಲ್ಲವೆಂದರೆ, ಇನ್ನೂ ಒಂದು ವರ್ಷ, ಎರಡು ವರ್ಷಗಳಾದರೂ ಇದನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ತನ್ವೀರ್ ಸೇಠ್ : ಮಾನ್ಯ ಮಂತ್ರಿಯವರಲ್ಲಿ ಒಂದು ಮನವಿ. ನೆಮ್ಮದಿ ಕೇಂದ್ರದಿಂದ ಆದಾಯ, ಜಾತಿ ಪ್ರಮಾಣ ಪತ್ರಗಳನ್ನು ಕೊಡುವ ಪದ್ಧತಿ ಮಾಡುತ್ತಿರುವಂಥದ್ದು ಇದೆ. 2006ರಲ್ಲಿ ನೆಮ್ಮದಿ ಕೇಂದ್ರ ಬಂದಂಥ ಸಂದರ್ಭದಲ್ಲಿ CET ಪರೀಕ್ಷೆಗೆ ಹೋಗುವಂಥ ಮಕ್ಕಳು ನೆಮ್ಮದಿ ಕೇಂದ್ರಕ್ಕೆ ಹೋದಂಥ ಸಮಯದಲ್ಲಿ ಅವರಿಗೆ ಸಮಯಕ್ಕೆ ಸರಿಯಾಗಿ ಆದಾಯ, ಜಾತಿ ಪ್ರಮಾಣ ಪತ್ರಗಳು ಸಿಗುವುದಿಲ್ಲ. ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಿ ನೇರವಾಗಿ ಅವರು ತಹಶೀಲ್ದಾರ್ ಕಛೇರಿಗೆ ಹೋಗಿ ಅಲ್ಲಿ ಪಡೆಯುವಂಥ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ನೀವು ಎಲ್ಲಾ data collect ಮಾಡಿ ತಕ್ಷಣ ಕೊಡುವಂಥ ವ್ಯವಸ್ಥೆ ಜಾರಿಯಾಗುವವರೆಗೆ CET ಪರೀಕ್ಷೆ ಸಂದರ್ಭದಲ್ಲಿ ಮಕ್ಕಳಿಗೆ ಆ ಪ್ರಮಾಣಪತ್ರಗಳು ತಕ್ಷಣ ಏನು ಬೇಕಾಗುತ್ತದೆ, ಅದನ್ನು ಏನಾದರೂ ಮಾಡಿ ಸರಳೀಕರಣ ಮಾಡಬೇಕು.

ಶ್ರೀ ಜಿ. ಕರುಣಾಕರರೆಡ್ಡಿ : ಮಾನ್ಯ ವೆಂಕಟರಾವ್ ನಾಡಗೌಡರವರು ration card ವಿಚಾರದ ಬಗ್ಗೆ ಹೇಳಿದರು. ಅದು ಗೊಂದಲವಾಗಿದ್ದು ನಿಜ. ಎಲ್ಲವನ್ನೂ ನೆಮ್ಮದಿ ಕೇಂದ್ರದ ಮೂಲಕವೇ ಮಾಡಬೇಕೆಂದಾಗ ಅವರಿಗೆ Workload ಜಾಸ್ತಿಯಾಯಿತು. ಈ ರೀತಿ ನೆಮ್ಮದಿ ಕೇಂದ್ರದಲ್ಲಿ ಸರಿಯಾಗಿ ಕೆಲಸವಾಗುತ್ತಿಲ್ಲವೆಂದು ಪೇಪರ್‌ನಲ್ಲಿ ಬಹಳಷ್ಟು ಸುದ್ದಿ ಬಂತು. ಮತ್ತೆ ನಾನು immediate ಆಗಿ ನಮ್ಮ ಕಾರ್ಯದರ್ಶಿಗಳಿಗೆ ಹೇಳಿ centres ಅನ್ನು ಹೆಚ್ಚಿಗೆ open ಮಾಡಿ ಆ problems solve ಮಾಡಬೇಕೆಂದು ಹೇಳಿದ್ದೆ. Last time ಅದನ್ನು ಮಾಡಿದ್ದೇವೆ. ಕೇವಲ ನೆಮ್ಮದಿ ಕೇಂದ್ರವೊಂದೇ ಅಲ್ಲದೆ ಇನ್ನೂ ಅನೇಕ ಕೇಂದ್ರಗಳಲ್ಲಿಯೂ ಕೂಡ ಅದನ್ನು receive ಮಾಡಿಕೊಂಡು ಅದನ್ನು ಮಾಡಲಿಕ್ಕೆ ವ್ಯವಸ್ಥೆ ಮಾಡಿದ್ದರು. ಅದರಲ್ಲೇನು ಸಮಸ್ಯೆ ಇದೆಯೋ ಅದನ್ನು ನಾವು attend ಮಾಡುತ್ತೇವೆ. ಅದಾದ ಮೇಲೆ, ಇನ್ನೊಬ್ಬ ಮಾನ್ಯ ಸದಸ್ಯರಾದ ತನ್ವೀರ್‌ಸೇಠ್‌ರವರು Caste Certificate ಬಗ್ಗೆ ಪ್ರಸ್ತಾಪ

ಮಾಡಿದರು. ಈ ಅಧಿವೇಶನ ನಡೆಯುವಾಗಲೇ ನಾನು ಶಿಕ್ಷಣ ಸಚಿವರನ್ನು ಕರೆದು ಒಂದು ಮೀಟಿಂಗ್ ಮಾಡಿದೆ. ಇವತ್ತು ತಮಿಳುನಾಡಿನಲ್ಲಿ ಏನು system ಇದೆ ಎಂದರೆ, ವಿದ್ಯಾರ್ಥಿ school ಗೆ ಸೇರುವ ಸಂದರ್ಭದಲ್ಲಿ ನಾವು ಇಂಥ caste, ನಮಗೆ ಇಷ್ಟು ಆದಾಯವಿದೆ ಎಂದು ಒಂದು declaration ಕೊಡುತ್ತಾರೆ. ಅವರು ಓದಿ ಮತ್ತೆ 7ನೇ class ಪೂರ್ತಿ ಮಾಡಿ Primary, higher education ಗೆ ಮುಗಿಸಿ ಹೋಗಬೇಕಾದರೆ ಅಷ್ಟರೊಳಗೆ ನಾವೇನು ಮಾಡುತ್ತೇವೆಂದರೆ, BEO ಅವರು ಇದನ್ನು Revenue Department ಗೆ ಕಳುಹಿಸಿ verification ಮಾಡಿಸಿ, ಆ declaration ನಲ್ಲೇನಾದರೂ ತಪ್ಪಿದ್ದರೆ ಅವರ ಮೇಲೆ criminal case ಹಾಕುವ ಒಂದು ಕಾನೂನು ಮಾಡಿ ನಾವು ಇದನ್ನು clear ಮಾಡಿದರೆ revenue ಮೇಲೆ ಅಂದರೆ ನೆಮ್ಮದಿ ಕೇಂದ್ರವಾಗಿರಬಹುದು, department ಮೇಲೆ ಒತ್ತಡ ಕಡಿಮೆಯಾಗುತ್ತದೆ. ಅದಕ್ಕೆ ಅವರೂ ಒಪ್ಪಿದ್ದಾರೆ. ನಾನು ನಮ್ಮ ಇಲಾಖೆಯಲ್ಲಿ ಮಾತನಾಡಿಕೊಂಡು ಇದನ್ನು implement ಮಾಡುತ್ತೇನೆ. ಆ ಸಮಸ್ಯೆ clear ಆಗುತ್ತದೆ. ಆದರೆ, ಅಲ್ಲಿಯವರೆಗೆ ತಾವು ಹೇಳಿದ ಹಾಗೆ COMED-K ಪರೀಕ್ಷೆ, ಇತ್ಯಾದಿ ಇದ್ದರೆ ನೆಮ್ಮದಿ ಕೇಂದ್ರದಲ್ಲಿ ಆ ಅಧಿಕಾರಿಗಳ ಹತ್ತಿರ ನಾನು ಮಾತನಾಡುತ್ತೇನೆ. ತೊಂದರೆ ಎನಿಸಿದರೆ immediately ತಹಶೀಲ್ದಾರ್‌ರವರೇ direct ಆಗಿ issue ಮಾಡಲಿಕ್ಕೆ ಹೇಳುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ನೀವು ಯಾವ ರೀತಿ entrust ಮಾಡಿದ್ದೀರಿ? Karnataka Transparency Act violate ಆಗಿದೆಯೇ ಎಂದು ಅಪ್ಪಚ್ಚು ರಂಜನ್‌ರವರು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿಲ್ಲ.

ಶ್ರೀ ಜಿ. ಕರುಣಾಕರ ರೆಡ್ಡಿ : ಕೇಂದ್ರ ಸರ್ಕಾರ conditions ಹಾಕಿದೆ. ಆ conditions fulfill ಮಾಡಲಿಲ್ಲವೆಂದರೆ ಮೂರು ಬಾರಿ ಅವರ ಮೇಲೆ penalty ಹಾಕಲಾಗುತ್ತದೆ. ಆ ರೀತಿ ಸುಮಾರು 1 ಕೋಟಿ ರೂ.ಗಳಷ್ಟು penalty collect ಮಾಡಿದ್ದೇವೆ. ಆ ರೀತಿ ಅವರನ್ನು ಸರ್ಕಾರ ಸುಮ್ಮನೆ ಬಿಟ್ಟಿಲ್ಲ. ನಿಮ್ಮ ಪಾಡಿಗೆ ನೀವಿರಿ ಎಂದು ಬಿಟ್ಟಿಲ್ಲ.